

# ಬೆಂಕಿಯಿಂದ ಉಂಟಾಗುವ ಅನಾಹುತಗಳು



### ನುಡಿಯಲ್ಪಟ್ಟ ಪ್ರವಾದನೆ

ಪ್ರವಾಹಗಳಿಂದಲೂ, ನೀರಿನಿಂದಲೂ, ಗಾಳಿಯಿಂದಲೂ ಅನಾಹುತಗಳನ್ನು ನೋಡಿದ ಹಾಗೆ, ಮುಂಬರುವ ಕಾಲಗಳಲ್ಲಿ, ಬೆಂಕಿಯಿಂದ ಉಂಟಾಗುವ ಭಯಂಕರವಾದ ಅನಾಹುತಗಳ ಸುದ್ದಿಗಳನ್ನು ಕೇಳುವಂತ ದಿವಸಗಳು ಬರುತ್ತದೆ ಎಂದು ಸೇನಾಧೀಶ್ವರನಾದ ಕರ್ತನು ನುಡಿಯುತ್ತಾನೆ. ಸ್ವಲ್ಪ ದಿನಗಳು ತಡೆಮಾಡಲ್ಪಟ್ಟದ್ದಂತ ಬೆಂಕಿಯ ದೂತರ ಕಾರ್ಯಗಳು ಮತ್ತೆ ನಿನ್ನ ದೇಶದಲ್ಲಿ ಹತ್ತಿ ಉರಿಯುವಂತೆಯೂ, ದೇಶದೊಳಗೂ, ಲೋಕದಾದ್ಯಂತ ಅನೇಕ ಭಾಗಗಳಲ್ಲಿ ಬೆಂಕಿಯಿಂದ ಉಂಟಾಗುವ ಅನಾಹುತಗಳ ಮೂಲಕ ಜನರ ಜೀವನಾಧಾರಕ್ಕೆ ಭಾದೆಯುಂಟಾಗುತ್ತದೆ. ಜನರ ಜೀವಗಳು ನಾಶಗೊಳ್ಳಲಿಕ್ಕಾಗುವಂತೆ ಇಗೋ, ಬೆಂಕಿಯ ಸಂಹಾರ ದೂತರಿಗೆ ಕಟ್ಟಳೆ ಇಡಲ್ಪಟ್ಟಿದೆ ಎಂದು ದೇವರು ಹೇಳುತ್ತಾನೆ. ಹೀಗಿದ್ದರೂ ನನ್ನ ನಾಮವನ್ನರಿತ ನನ್ನ ಜನರು ಮುಂಚಿತವಾಗಿಯೇ ತಮ್ಮ ದೇಶಕ್ಕಾಗಿ ಕೈಗಳನ್ನೆತ್ತಿ, ಈ ದೂತರುಗಳು ಕಾರ್ಯ ಮಾಡದ ಹಾಗೆ ದೇಶಕ್ಕಾಗಿ ಗೋಳಾಡಿ ಮೊರೆಯಿಟ್ಟು, ಒಡಕಿನಲ್ಲಿ ನಿಂತು ಪ್ರಾರ್ಥಿಸಿದರೆ ಇಗೋ, ನಾನು ಅವರಿಗೆ ಕಟ್ಟಳೆ ಇಟ್ಟು ದೇಶಕ್ಕೆ ನಾನು ನುಡಿದಂತ ಕೇಡುಗಳನ್ನು ನೆರವೇರದಂತೆ ನಾನು ಅವುಗಳನ್ನು ತಡೆಮಾಡುವೆನು ಎಂದು ದೇವರು ನುಡಿಯುತ್ತಾನೆ. ಇಲ್ಲದಿದ್ದರೆ ಬೆಟ್ಟಗಳಲ್ಲಿ ಬೆಂಕಿಯೂ, ಮನೆಗಳಲ್ಲಿ ಬೆಂಕಿಯೂ, ಕಾರ್ಖಾನೆ ಗಳಲ್ಲಿ ಬೆಂಕಿಯೂ ಜನರು ಸೇರುವ ಸ್ಥಳಗಳಲ್ಲಿಯೂ, ಅನೇಕ ಅನಾಹುತ ಉಂಟಾಗುತ್ತದೆ. ಜನರು ಒಂದು ಗೂಡುವ ಸ್ಥಳಗಳಲ್ಲಿಯೂ ಬೆಂಕಿಯಿಂದಲೂ ಗಂಧಕದಿಂದಲೂ ಚಿಕ್ಕಮಕ್ಕಳು ಒಂದುಸೇರುವ ಶಾಲೆಗಳಲ್ಲಿಯೂ, ಪ್ರಯಾಣಮಾಡುವ ವಾಹನಗಳಲ್ಲಿಯೂ, ಬಸ್ಸು, ರೈಲು, ಕಾರು, ವಿಮಾನಗಳಲ್ಲಿಯೂ ಬೆಂಕಿಯಿಂದ ಉಂಟಾಗುವ ಅನಾಹುತಗಳ ಬಗ್ಗೆ ಮುಂಬರುವ ದಿವಸಗಳಲ್ಲಿ ಸುದ್ದಿ ಕೇಳುವಿರಿ ಎಂದು ಕರ್ತನು ನುಡಿಯುತ್ತಾನೆ. ಮತ್ತು ನನ್ನ ಮಕ್ಕಳು ನನ್ನ ನಾಮವನ್ನು ಹೊಂದಿರುವ ನನ್ನ ಜನರು, ಈ ಕೇಡು ಉಂಟಾಗದಂತೆ ದೇಶಕ್ಕಾಗಿ ಮೊರೆಯಿಟ್ಟು ಗೋಳಾಡಿದರೆ, ನಾನು ಕಟ್ಟಳೆಯಿಟ್ಟು, ನಾನು ಅವರ ಕ್ರಿಯೆಗಳು ನಡೆಯದಂತೆ, ಅವರ ಕ್ರಿಯೆ ಗಳಿಗೆ ನಾನು ಕಟ್ಟಳೆ ಇಡುವೆನು ಎಂದು ಸೇನಾಧೀಶ್ವರನಾದ ಯೆಹೋವನು ನುಡಿಯುತ್ತಾನೆ. (ಪ್ರಕಟಿಸಲ್ಪಟ್ಟ ದಿನ 01.01.2018 ರಾಮನಾಥಪುರಂ)

## ಪ್ರಾರ್ಥನಾ ಮನವಿ

01. ಲೋಕದಾದ್ಯಂತ ಅನೇಕ ಸ್ಥಳಗಳಲ್ಲಿ ಬೆಂಕಿಯಿಂದ ಉಂಟಾಗುವ ಅನಾಹುತಗಳ ಮೂಲಕ ಜನರ ಜೀವನಾಧಾರ ಮತ್ತು ಆರ್ಥಿಕ ವ್ಯವಸ್ಥೆ ಭಾದೆಗೊಳಪಡುತ್ತದೆಂದೂ, ಜೀವನಾಶಗಳು ಉಂಟಾಗುತ್ತದೆ ಎಂದೂ ತಿಳಿಸಲ್ಪಟ್ಟಿದೆ ಇವುಗಳನ್ನು ತಡೆಮಾಡಲಿ ಕ್ಕಾಗುವಂತೆ ದೇವರ ಬಳಿ ಗೋಳಾಡಿ ಪ್ರಾರ್ಥಿಸಿರಿ.

02. ಜನರ ಪಾಪಗಳ ನಿಮಿತ್ತ ದೇವರು ತನ್ನ ಸಂಹಾರಕ ದೇವದೂತರಿಗೆ ಕಟ್ಟಳೆ ಇಟ್ಟಿದ್ದಾನೆ. ಆದರೂ ನನ್ನ ನಾಮವನ್ನು ಹೊಂದಿರುವ ನನ್ನ ಜನರು ಮುಂಚಿತವಾಗಿ ತಮ್ಮ ಕೈಗಳನ್ನೆತ್ತಿ ಒಡಕಿನಲ್ಲಿ ಪ್ರಾರ್ಥಿಸಿದರೆ, ದೇಶದಲ್ಲಿ ನಾನು ನುಡಿದಂತ ಕೇಡುಗಳು ನೆರವೇರದ ಹಾಗೆ ನಾನು ಅವುಗಳನ್ನು ತಡೆಮಾಡಿ ಹಾಕುವೆನು ಎಂದು ನುಡಿದಿದ್ದಾನೆ. ಆದ್ದರಿಂದ, ಇದಕ್ಕಾಗಿ ಪ್ರಾರ್ಥಿಸುವ ಬಹು ಜನರು ಎದ್ದೇಳಲಿಕ್ಕಾಗುವಂತೆ ಪ್ರಾರ್ಥಿಸಿರಿ.

03. ಬೆಟ್ಟಗಳಲ್ಲಿ ಬೆಂಕಿಯೂ, ಮನೆಗಳಲ್ಲಿ ಬೆಂಕಿಯೂ, ಕಾರ್ಖಾನೆಗಳಲ್ಲಿ ಬೆಂಕಿಯೂ, ಜನರು ಸೇರುವ ಅನೇಕ ಕಡೆಗಳಲ್ಲಿ ಬೆಂಕಿಯ ಅನಾಹುತಗಳು ಉಂಟಾಗುತ್ತವೆ ಎಂದು ಪ್ರಕಟಿಸಲ್ಪಟ್ಟಿದೆ, ಕೆಲವು ದಿನಗಳ ಹಿಂದೆ ತಮಿಳುನಾಡಿನ ಬೆಟ್ಟವೊಂದರಲ್ಲಿ ಉಂಟಾದಂತ ಬೆಂಕಿಯ ಅನಾಹುತದಲ್ಲಿ ಅನೇಕರು ಬಲಿಯಾದರು. ಮುಂದೆ ಇಂತಹ ಘಟನೆಗಳು ನಡೆಯದ ಹಾಗೆ ಪ್ರಾರ್ಥಿಸಿರಿ.

04. ಜನರು ಒಂದುಗೂಡುವ ಸ್ಥಳಗಳಲ್ಲಿ ಬೆಂಕಿಯಿಂದಲೂ, ಗಂಧಕದಿಂದಲೂ ಉಂಟಾಗುವ ಅನಾಹುತಗಳ ಸುದ್ದಿಗಳನ್ನು ಬಹಳವಾಗಿ ಕೇಳುವಿರಿ ಎಂದು ನುಡಿಯಲ್ಪಟ್ಟಿದೆ. ಇವು ಬೆಂಕಿಯಿಂದಲೂ, ಭಯೋತ್ಪಾದನೆಯಿಂದಲೂ ಉಂಟಾಗುವ ಸಂಭವಗಳಾಗಿ ಇರಬಹುದು. ಜೀವನಾಶಗಳು ಉಂಟಾಗುವ ಇಂತಹ ಅನಾ ಹುತಗಳಿಂದ ಸಂರಕ್ಷಿಸಲ್ಪಡುವಂತೆ ಪ್ರಾರ್ಥಿಸಿರಿ.

05. ವಾಹನಗಳಿಂದಲೂ, ಬಸ್ಸು, ರೈಲು, ವಿಮಾನಗಳಂತಹ ಸ್ಥಳಗಳಿಗೆ ಬೆಂಕಿಯಿಂದ ಅನಾಹುತಗಳು ನಡೆಯದ ಹಾಗೆ ಪ್ರಾರ್ಥಿಸಿರಿ. ವಿಶೇಷವಾಗಿ ಶಾಲೆಗಳಲ್ಲಿಯೂ, ಮಕ್ಕಳ ನಡುವೆಯೂ ಇಂತಹ ಬೆಂಕಿಯಿಂದ ಅನಾಹುತಗಳು ಯಾವ ದೇಶದಲ್ಲೂ ಉಂಟಾಗದಂತೆಯೂ, ನಮ್ಮ ದೇಶದ ಮಕ್ಕಳಿಗಾಗಿಯೂ ಪ್ರಾರ್ಥಿಸಿರಿ.